## ಕರ್ನಾಟಕ ಸರ್ಕಾರ

**ಸಂಖ್ಯೆ:** ಅಪಜೀ 99 ಸಿಆರ್‌ಝೆಡ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 27.04.2021.

### ಅಧಿಸೂಚನೆ

### ಪಾಲುದಾರರು ಮತ್ತು ಸಾರ್ವಜನಿಕ ಸಲಹೆ, ಆಕ್ಷೇಪಣೆ ಮತ್ತು ಅನಿಸಿಕೆಗಳನ್ನು ಆಹ್ವಾನಿಸಿ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯ ಪ್ರಕಟಣೆ

ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಸಿ.ಆರ್.ಜೆಡ್. ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್(ಇ) ದಿನಾಂಕ: 18.01.2019 ರಂದು ಹೊರಡಿಸಿ ಕರಾವಳಿ ಪ್ರದೇಶಗಳಲ್ಲಿ ವಾಸಿಸುತ್ತಿರುವ ಮೀನುಗಾರ ಸಮುದಾಯ ಮತ್ತಿತರ ಸ್ಥಳೀಯ ಸಮುದಾಯಗಳ ಜೀವನೋಪಾಯ ಭದ್ರತೆ ದೊರಕುವಂತೆ ನೋಡಿಕೊಳ್ಳುವುದಕ್ಕಾಗಿ ಕರಾವಳಿ ತೀರಗಳು, ಅವುಗಳ ವಿಶಿಷ್ಟ ಪರಿಸರ ಮತ್ತು ಅದರ ಕಡಲ ಪ್ರದೇಶವನ್ನು ಸಂರಕ್ಷಿಸಿ ಕಾಪಾಡಿಕೊಂಡು ಬರಲು ಮತ್ತು ಕರಾವಳಿ ಪ್ರದೇಶಗಳಲ್ಲಿ ಪ್ರಾಕೃತಿಕ ವಿಕೋಪಗಳು ಮತ್ತು ಜಾಗತಿಕ ತಾಪಮಾನ ಏರಿಕೆಯ ಅಪಾಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ವೈಜ್ಞಾನಿಕ ತತ್ವಗಳ ಆಧಾರದ ಮೇಲೆ ಒಂದು ಸುಸ್ಥಿರ ರೀತಿಯಲ್ಲಿ ಅಭಿವೃದ್ಧಿಗೆ ಉತ್ತೇಜನ ನೀಡುವುದಕ್ಕಾಗಿ ಕರಾವಳಿ ನಿಯಂತ್ರಣ ವಲಯ ಎಂದು ಈ ಮೂಲಕ ಘೋಷಿಸಿರುತ್ತದೆ.

ಸದರಿ ಅಧಿಸೂಚನೆಯ ಕಂಡಿಕೆ 6ರ ಉಪ ಕಂಡಿಕೆ (iii) ರಿಂದ (v) ರಂತೆ ಅನುಬಂಧ IV ರಲ್ಲಿನ ಮಾರ್ಗಸೂಚಿಗಳ ಅನುಸಾರ ಸಿ.ಆರ್.ಜೆಡ್. ವಲಯದ ವಿವಿಧ ವರ್ಗಗಳನ್ನು ಗುರುತಿಸಿ, ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯನ್ನು (Costal Zone Management Plan CZMP) 1 : 25,000 ಅಳತೆಯಲ್ಲಿ ನಕ್ಷೆಯನ್ನು ತಯಾರಿಸಿ, ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ ಅನುಮೋದನೆ ಪಡೆದುಕೊಳ್ಳಬೇಕಾಗಿರುತ್ತದೆ.

ಕರ್ನಾಟಕ ರಾಜ್ಯ ಸರ್ಕಾರವು ಸಿ.ಆರ್.ಜೆಡ್. ಅಧಿಸೂಚನೆ 2019ರ ಪ್ಯಾರಾ 6ರ ಉಪಕಂಡಿಕೆ (ii) ಅನುಸಾರ ರಾಜ್ಯದ ಕಡಲತೀರ ವಲಯಗಳಿಗಾಗಿ ಕಡಲತೀರ ವಲಯ ನಿರ್ವಹಣಾ ಯೋಜನೆಗಳನ್ನು ತಯಾರಿಸುವ ಕಾರ್ಯವನ್ನು ಎನ್.ಸಿ.ಎಸ್.ಸಿ.ಎಂ (NCSCM), ಚೆನ್ನೈರವರಿಗೆ ವಹಿಸಿ ಕೊಟ್ಟಿರುತ್ತದೆ. ಅದರಂತೆ, ಸದರಿ ಸಂಸ್ಥೆಯು 1:25,000 ಅಳತೆಯ ನಕ್ಷೆಯಲ್ಲಿ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ (CZMP) ಯನ್ನು ತಯಾರಿಸಿರುತ್ತದೆ. ಈ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯನ್ನು ಸಾರ್ವಜನಿಕರ ಅವಗಾಹನೆಗಾಗಿ ಹಾಗೂ ಅವರಿಂದ ಯಾವುದೇ ತಕರಾರುಗಳು, ಸಲಹೆಗಳು ಮತ್ತು ಅನಿಸಿಕೆಗಳನ್ನು ಆಹ್ವಾನಿಸಲು ಪ್ರಕಟಣೆ ಹೊರಡಿಸಬೇಕಾಗಿರುತ್ತದೆ.

ಆದುದರಿಂದ, ಸಾರ್ವಜನಿಕ ಅದರಲ್ಲೂ ಪಾಲುದಾರರ ಪರಿಶೀಲನೆಗಾಗಿ ಹಾಗೂ ಅವರ ತಕರಾರುಗಳು, ಸಲಹೆಗಳು ಮತ್ತು ಅನಿಸಿಕೆಗಳಿದ್ದಲ್ಲಿ ಅವುಗಳ ಸಲ್ಲಿಕೆಗಾಗಿ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯನ್ನು ಈ ಕೆಳಕಂಡ ದಾಖಲೆಗಳೊಂದಿಗೆ ಈ ಮುಂದೆ ನಮೂದಿಸಲಾಗಿರುವ ಕಛೇರಿಗಳಲ್ಲಿ ಇರಿಸಲಾಗಿದೆ.

**ಸಾರ್ವಜನಿಕರ ಪರಿಶೀಲನೆ/ ಗಮನಕ್ಕಾಗಿ ಇರಿಸಲ್ಪಟ್ಟಿರುವ ದಾಖಲೆಗಳು:**

1. ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಪ್ರಕಟಿಸಲ್ಪಟ್ಟಿರುವ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್.37(ಇ) ದಿನಾಂಕ: 18.01.2019 ಅನುಸಾರ 1:25,000 ಅಳತೆಯ ನಕ್ಷೆಗಳಲ್ಲಿ ತಯಾರಿಸಲ್ಪಟ್ಟಿರುವ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ (CZMP).

2. ಕಡಲ ತೀರ ವಲಯ ನಿಯಂತ್ರಣ ವಲಯ, ಅದರ ವಿವಿಧ ವರ್ಗೀಕರಣ ಎಂದರೆ ಸಿ.ಆರ್.ಜೆಡ್-I, ಸಿ.ಆರ್.ಜೆಡ್-II, ಸಿ.ಆರ್.ಜೆಡ್-III, ಸಿ.ಆರ್.ಜೆಡ್-IIIA, ಸಿ.ಆರ್.ಜೆಡ್-IIIB, ಸಿ.ಆರ್.ಜೆಡ್-IV ಹಾಗೂ ಈ ಪ್ರತಿಯೊಂದರಲ್ಲೂ ಅನುಮತಿಸಬಹುದಾದ, ನಿಷೇಧಿಸಲ್ಪಟ್ಟ ಮತ್ತು ನಿಯಂತ್ರಿಸಲ್ಪಟ್ಟಿರುವ ಚಟುವಟಿಕೆಗಳನ್ನೊಳಗೊಂಡ ಕಿರು ಟಿಪ್ಪಣಿ.
3. ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದಿಂದ ಹೊರಡಿಸಲ್ಪಟ್ಟಿರುವ ಅಧಿಸೂಚನೆ ಸಂಖ್ಯೆ: ಜಿ.ಎಸ್.ಆರ್.37(ಇ) ದಿನಾಂಕ: 18.01.2019 ರ ಪ್ರತಿ ಮತ್ತು ಅದರ ಮೇಲೆ ಹೊರಡಿಸಲ್ಪಟ್ಟಿರುವ ತಿದ್ದುಪಡಿಗಳು.
4. ಸಿ.ಆರ್.ಜೆಡ್. ಅಧಿಸೂಚನೆ, 2019 ರ ಸಮೀಪ ಕನ್ನಡ ಅನುವಾದದ ಪ್ರತಿ.

**ಸಾರ್ವಜನಿಕರ ಪರಿಶೀಲನೆ/ಗಮನಕ್ಕಾಗಿ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ (CZMP) ಯ ಪ್ರತಿಯನ್ನು ಇರಿಸಲಾಗಿರುವ ಕಛೇರಿಗಳು:**

1. ವಿಶೇಷ ನಿರ್ದೇಶಕರು (ತಾಂತ್ರಿಕ ಕೋಶ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕೊಠಡಿ ಸಂಖ್ಯೆ: 710, 7ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು-560001.
2. ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ.
3. ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ ಜಿಲ್ಲೆ ಮತ್ತು ಉತ್ತರ ಕನ್ನಡ ಜಿಲ್ಲೆ.
4. ಪ್ರಾದೇಶಿಕ ನಿರ್ದೇಶಕರು(ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ, ಮಂಗಳೂರು, ಉಡುಪಿ ಮತ್ತು ಕಾರವಾರ.
5. ತಹಸೀಲ್ದಾರ್, ಮಂಗಳೂರು, ಉಡುಪಿ, ಕುಂದಾಪುರ, ಬೈಂದೂರು, ಬ್ರಹ್ಮಾವರ, ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ.
6. ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ಮಂಗಳೂರು, ಉಡುಪಿ, ಕುಂದಾಪುರ, ಬ್ರಹ್ಮಾವರ, ಬೈಂದೂರು, ಭಟ್ಕಳ, ಹೊನ್ನಾವರ, ಕುಮಟಾ, ಅಂಕೋಲಾ ಮತ್ತು ಕಾರವಾರ.
7. ಕಡಲತೀರ ವಲಯ ನಿರ್ವಹಣಾ ಯೋಜನೆ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಗ್ರಾಮ ಪಂಚಾಯಿತಿಗಳು.

ಮುಂದುವರೆದು, ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯ ವಿದ್ಯುನ್ಮಾನ ಪ್ರತಿ ಹಾಗೂ ಮತ್ತಿತರ ದಾಖಲೆಗಳನ್ನು ಪ್ರಾಧಿಕಾರದ ವೆಬ್‌ಸೈಟ್ https://ksczma.karnataka.gov.in ದಲ್ಲೂ ಇರಿಸಲಾಗಿದೆ.

ಎಲ್ಲಾ ಪಾಲುದಾರರು ಮತ್ತು ಸಾರ್ವಜನಿಕರು ಈ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆಯನ್ನು ಪರಿಶೀಲಿಸಿ ಅವರ ತಕರಾರುಗಳು, ಸಲಹೆಗಳು ಮತ್ತು ಅನಿಸಿಕೆಗಳೇನಾದರೂ ಇದ್ದಲ್ಲಿ ಅವುಗಳನ್ನು ಲಿಖಿತ ರೂಪದಲ್ಲಿ ವಿಶೇಷ ನಿರ್ದೇಶಕರು(ತಾಂತ್ರಿಕ ಕೋಶ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕೊಠಡಿ ಸಂಖ್ಯೆ: 710, 7ನೇ ಮಹಡಿ ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಅಧಿಸೂಚನೆಯ ದಿನಾಂಕದಿಂದ 60 ದಿನಗಳೊಳಗಾಗಿ ತಲುಪುವಂತೆ ಕಳುಹಿಸಿ ಕೊಡಲು ಕೋರಲಾಗಿದೆ. ತಕರಾರುಗಳು, ಸಲಹೆಗಳು ಮತ್ತು ಅನಿಸಿಕೆಗಳನ್ನು ನಿಗದಿತ ಸಮಯಕ್ಕೆ ಮುಂಚಿತವಾಗಿ ಮಿಂಚಂಚೆ: msksczma@gmail.com ಗೆ ಇ-ಸಂದೇಶ ಕಳುಹಿಸುವ ಮೂಲಕವೂ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಸಮಯದ ನಂತರ ಸ್ವೀಕೃತವಾಗುವ ತಕರಾರುಗಳು, ಸಲಹೆಗಳು ಮತ್ತು ಅನಿಸಿಕೆಗಳು ಇತ್ಯಾದಿಗಳನ್ನು ಪರಿಗಣಿಸಲಾಗುವುದಿಲ್ಲ.

ಈ ಸಂಬಂಧ ಸಾರ್ವಜನಿಕ ಆಲಿಕೆಗಳನ್ನು ನಿಗದಿತ ದಿನಾಂಕವನ್ನು ಪ್ರಕಟಿಸಿ, ಜಿಲ್ಲಾ ಮಟ್ಟದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿಯಮಾನುಸಾರ ನಡೆಸಲಾಗುವುದು.

22/4/21

(ಶಾಶ್ವತಿ ಮಿಶ್ರ)
ವಿಶೇಷ ನಿರ್ದೇಶಕರು (ತಾಂತ್ರಿಕ ಕೋಶ),
(ಜೀವಿಪರಿಸ್ಥಿತಿ ಮತ್ತು ಪರಿಸರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.